ಸಂಪೂರ್ಣವಾಗಿ ನಿಷೇದಿಸಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ಸಧ್ಯದ ತೀರ್ಪಿನ ಪ್ರಕಾರ 240ದಿನಗಳ ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು, ತೆಗೆದುಹಾಕಲು ಬರುವುದಿಲ್ಲ. ಅಲ್ಲದೆ, ದಿನಾಂಕ 1-7-84 ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಸಕ್ರಮಗೊಳಿಸಲೂ ಸಹ ಅವಕಾಶವಿರುವುದಿಲ್ಲ.

ಈ) ಮೇಲೆ 'ಇ' ನಲ್ಲಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಸಾರ್ವಜನಿಕರ ಸೌಲಭ್ಯಕ್ಕಾಗಿ ಮೀಸಲಾಗಿರುವ ತುಂಡು ಜಾಗವನ್ನು ಮಹಾನಗರ ಪಾಲಿಕೆ ನಿವೇಶನಕ್ಕಾಗಿ ಪರಿವರ್ತಿಸಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 331(585)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಶ್ರೀ ರಾಮಪುರದ ಬಡಾವಣೆ ಎ.ಡಿ. ಬ್ಲಾಕ್, 4ನೇ ಮುಖ್ಯ ರಸ್ತೆ, ಶ್ರೀ ವಿದ್ಯಾಸಂಸ್ಥೆಯ ಪಕ್ಕದಲ್ಲಿ ಸಾರ್ವಜನಿಕರಲ್ಲಿ ಇರುವ ಪ್ರದೇಶ ಮಹಾನಗರಪಾಲಿಕೆಗೆ ಸೇರಿದೆಯೇ?

ಆ) ಹಾಗಿದ್ದಲ್ಲಿ, ಆ ಸ್ಥಳದ ಸರ್ವೆ ನಂ. ಎಷ್ಟು? ಜಾಗದ ವಿಸ್ತೀರ್ಣವೆಷ್ಟು?

ಇ) ಕಳೆದ 15-20 ವರ್ಷಗಳಿಂದ ಸಾರ್ವಜನಿಕರಿಗೆ ನಲ್ಲಿಯನ್ನು ಹಾಕಿ ನೀರು ಸರಬರಾಜಿನ ಅನುಕೂಲವಾಗಿರುವ ಹಾಗೂ ಜನರು ಓಡಾಡಲು ಉಪಯೋಗಿಸುತ್ತಿರುವ ಈ ಸ್ಥಳವನ್ನು ಮಹಾನಗರಪಾಲಿಕೆಯವರು ನೀತಿ ನಿಯಮಗಳನ್ನು ಗಾಳಿಗೆ ತೂರಿ ವ್ಯಕ್ತಿಯೊಬ್ಬರಿಗೆ ನಿವೇಶನಕ್ಕಾಗಿ ಮಂಜೂರು ಮಾಡಲು ಸಿದ್ಧತೆಗಳನ್ನು ಮಾಡಿಕೊಂಡಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಸಾರ್ವಜನಿಕ ಸೌಲಭ್ಯಕ್ಕಾಗಿ ಇರುವ ಈ ಜಾಗವನ್ನು ನಿವೇಶನಕ್ಕಾಗಿ ಮಾರ್ಪಡಿಸದೇ ಯಥಾ ಸ್ಥಿತಿ ಮುಂದುವರಿಸುವ ಬಗ್ಗೆ ಮಹಾನಗರದ ಪಾಲಿಕೆಯವರು ಅಗತ್ಯ ಕ್ರಮ ಕೈಗೊಳ್ಳುವರೇ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು.

ಆ) ಈ ಭೂಮಿಗೆ ಸರ್ವೆ ನಂ. ಇರುವುದಿಲ್ಲ. ವಿಸ್ತೀರ್ಣ 20ಕ್ಕೆ15ದಿನಗಳು.

ಇ) ಇಲ್ಲ.

ಈ) ಹೌದು.

ವಿಷಯ : ಬೆಂಗಳೂರು ಮಹಾನಗರಪ್ರಾಧಿಕಾರದ ಚಟುವಟಿಕೆಗಳು.

ಚುಕ್ಕೆ ಗುರುತಿಲ್ಲದೆ ಪ್ರಶ್ನೆ ಸಂಖ್ಯೆ : 332 (417)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರಾಭಿವೃದ್ಧಿ ಪ್ರಾಧಿಕಾರವು ಎಂದು ಅಸ್ತಿತ್ವಕ್ಕೆ ಬಂದಿತು, ಇದರ ಕಾರ್ಯ ಚಟುವಟಿಕೆಗಳೇನು?

ಆ) ಕಳೆದ ಎರಡು ವರ್ಷಗಳಿಂದ ಈ ಪ್ರಾಧಿಕಾರದ ಮೂಲಕ ಬೆಂಗಳೂರು ಮಹಾನಗರದ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಅವಧಿಯಲ್ಲಿ ಖರ್ಚು ಮಾಡಿದ ಹಣದ ಮೊತ್ತವೆಷ್ಟು?

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ನೆರವೇನಾದರೂ ಬಂದಿದೆಯೇ?

ಈ) ಬೆಂಗಳೂರು ಮೆಗಾಸಿಟಿ ಯೋಜನೆಯಲ್ಲಿ ಈ ಪ್ರಾಧಿಕಾರದ ಪಾತ್ರವೇನು?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ಸಚಿವರು) :

ಅ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರವು ಆಜ್ಞೆ ಕ್ರಮಾಂಕ ಹೆಚ್‌ಯುಡಿ 16 ಬಿಎಂಆರ್ 87 ದಿನಾಂಕ 19-12-87ರಲ್ಲಿ ರಚಿಸಿತು.

ಈ ಪ್ರಾಧಿಕಾರದ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿವೆ :

1) ಬೆಂಗಳೂರು ಮಹಾನಗರ ಪ್ರದೇಶವನ್ನು ಮೋಜಣಿ ಮಾಡಿ ಆ ಬಗ್ಗೆ ವರದಿ ತಯಾರಿಸುವದು.

2) ಬೆಂಗಳೂರು ಮಹಾನಗರ ಪ್ರದೇಶಕ್ಕೆ ಸ್ಟ್ರಕ್ಚರ್ ಪ್ಲಾನ್ ತಯಾರಿಸುವುದು.

3) ಸ್ಟ್ರಕ್ಚರ್ ಪ್ಲಾನ್ ನಲ್ಲಿ ಸೂಚಿಸಿರುವಂತೆ ಪ್ರಸ್ತಾವನೆಗಳನ್ನು ಕಾರ್ಯಗತಗೊಳಿಸುವುದು.

4) ಸ್ಟ್ರಕ್ಚರ್ ಪ್ಲಾನ್‌ನ್ನು ಕಾರ್ಯಗತಗೊಳಿಸಲು ಎಷ್ಟು ಯೋಜನೆಗಳು ಬೇಕಾಗಿದೆಯೋ ಅಷ್ಟು ಯೋಜನೆಗಳನ್ನು ರೂಪಿಸುವುದು.

5) ನಗರ ಯೋಜನಾ ಸ್ಕೀಂಗಳನ್ನು ಪಡೆದು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಸಮನ್ವಯತೆಯವನ್ನು ಏರ್ಪಡಿಸುವುದು ಮತ್ತು ಸದರೀ ಸ್ಕೀಂಗಳ ಪ್ರಕಾರ ಬೆಂಗಳೂರು ಮಹಾನಗರ ಪ್ರದೇಶವನ್ನು ಅಭಿವೃದ್ಧಿಗೊಳಿಸುವುದು.

6) ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಯಾವುದೇ ಯೋಜನೆಗಳಿಗೆ ಹಣಕಾಸು ವ್ಯವಸ್ಥೆ ಮಾಡುವುದು ಮತ್ತು ಈ ಪ್ರದೇಶದಲ್ಲಿನ ಸ್ಥಳೀಯ ಪ್ರಾಧಿಕಾರಿಗಳಿಗೆ ಸದರೀ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುವುದು.

7) ಸರ್ಕಾರವು ವಹಿಸಿದ ಇತರೆ ಕೆಲಸಗಳನ್ನು ಮಾಡುವುದು ಅಥವಾ ಪ್ರಾಧಿಕಾರದ ರಚನೆಯ ಉದ್ದೇಶಿತ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವುದು.